# ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.
## ಸಿ.ಸಿ ನಂಃ **963/2019**

| | | |
|---|---|---|
| ಸಾಕ್ಷಿಯ ಹೆಸರುಃ | ಶ್ರೀ ಜೆಟ್ಟೆಪ್ಪ | ಫ್ರಾಸಾಃ 04 |
| ತಂದೆ ಹೆಸರುಃ | ಭೀಮಣ್ಣ | ಚಾಸಾಃ 01 |
| ವಯಸ್ಸುಃ | 38 ವರ್ಷ | ದಿಃ 07-04-2026 |
| ಉದ್ಯೋಗಃ | ಅಬಕಾರಿ ನಿರೀಕ್ಷಕರು ಶಹಪೂರ ಉಪ-ವಿಭಾಗ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಶಹಪೂರ | |

<u>ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ</u>

ನಾನು ದಿಃ 15.03.2019 ರಿಂದ 04.06.2019 ವರೆಗೆ ಯಾದಗಿರಿ ಅಬಕಾರಿ ವಲಯದಲ್ಲಿ ಹೆಚ್ಚುವರಿ ಪ್ರಭಾರಿ ಅಬಕಾರಿ ಉಪ-ನಿರೀಕ್ಷಕನಾಗಿ ಕಾರ್ಯ ನಿರ್ವಹಿಸಿರುತ್ತೇನೆ.

ನಾನು ದಿನಾಂಕ 05-04-2019 ರಂದು ಸಂಜೆಃ 7.15 ಗಂಟೆ ಸುಮಾರಿಗೆ ನಾವುಗಳು ಸೈದಾಪೂರ ಕ್ರಾಸ್ ಹತ್ತಿರ ಗಸ್ತು ಮಾಡುತ್ತಿದ್ದಾಗ ಸೈದಾಪೂರದಿಂದ ಮಾದ್ವಾರ ಗ್ರಾಮದ ಕಡೆಗೆ ಬೈಕನ ಮೇಲೆ ಅಕ್ರಮ ಮದ್ಯ ಸಾಗಾಟ ನಡೆದಿರುವ ಬಗ್ಗೆ ನನಗೆ ಮಾಹಿತಿ ಬಂದಿರುತ್ತದೆ. ನಾವು ತಕ್ಷಣ ನೀಲಹಳ್ಳಿ ಕ್ರಾಸ್ ಹತ್ತಿರ ಹೋಗಿ ನಿಂತುಕೊಂಡೇವು. ನಂತರ ಚಾಸಾಃ 3 ರವರ ಸಹಾಯದಿಂದ ಚಾಸಾಃ 2 ರವರನ್ನು ಕರೆಯಿಸಿ ಪಂಚರನ್ನಾಗಿ ಬರಮಾಡಿಕೊಂಡೆನು. ನಂತರ 2-3 ಜನ ದಾರಿ ಹೋಕರನ್ನು ಪಂಚರಾಗಿ ಸಹಕರಿಸುವಂತೆ ಕೇಳಿಕೊಂಡಿದ್ದು ಅವರುಗಳು ಸಹಕರಿಸಿದ ಕಾರಣ ಚಾಸಾಃ 3 ರವರನ್ನು ಇನ್ನೊಬ್ಬ ಪಂಚನನ್ನಾಗಿ ನೇಮಕ ಮಾಡಿಕೊಂಡಿದ್ದೇವು. ನಂತರ ಸೈದಾಪೂರ ಕಡೆಯಿಂದ ಒಂದು ದ್ವಿಚಕ್ರ ವಾಹನ ಬರುತ್ತಿವುದು ಕಂಡುಬಂದಿದ್ದು ನಾವುಗಳು ಅದನ್ನು ತಡೆದು ನಿಲ್ಲಿಸಿದ್ದೇವು. ಬೈಕನಲ್ಲಿ ಇಬ್ಬರು ವ್ಯಕ್ತಿಗಳು ಇದ್ದು ಹಿಂಬದಿ ಸವಾರನ ಕೈಯಲ್ಲಿ ಒಂದು ರಟ್ಟಿನ ಪೆಟ್ಟಿಗೆ ಇತ್ತು. ನ್ಯಾಯಾಲಯದಿಂದ ವಾರೆಂಟ್ ಪಡೆದುಕೊಳ್ಳಲು ಸಮಯಾವಕಾಶ ಇಲ್ಲದಿರುವುದರಿಂದ ಸ್ಥಳದಲ್ಲಿ ಶೋಧನಾ ಆಧಾರ ಪತ್ರ ತಯಾರಿಸಿಕೊಂಡು ಪರಿಶೀಲನೆ ಮಾಡಲಾಗಿ ರಟ್ಟಿನ ಪೆಟ್ಟಿಗೆಯಲ್ಲಿ 330 ಮಿಲಿಯ 24 ಬೀಯರ ಬಾಟಲಿಗಳು ಹಾಗೂ ಬೈಕನ ಪೆಟ್ರೋಲ್ ಟ್ಯಾಂಕಿನ ಮೇಲೆ 1 ಚೀಲದಲ್ಲಿ ಸುಮಾರು 10 ಲೀಟರ ಕಲಬೆರಿಕೆ ಸೇಂದಿ ಇರುವುದು

ಕಂಡುಬಂದಿರುತ್ತದೆ. ಬೈಕ ಕಪ್ಪು ಬಣ್ಣದ ಕೆಎ-02-ಎಚ್ ಎಮ್-4429 ಸಂಖ್ಯೆಯ ಹೀರೊ ಪ್ಯಾಶನ್ ಆಗಿರುವುದು ಕಂಡುಬಂದಿರುತ್ತದೆ. ಆರೋಪಿತರು ತಮ್ಮ ಹತ್ತಿರ ಮದ್ಯ ಹಾಗೂ ಸೇಂದಿ ಸಾಗಾಟ ಮಾಡಲು ಪರವಾನಿಗೆ ಪತ್ರ ಇಲ್ಲ ಎಂದು ತಿಳಿಸಿದ್ದರು. ಆರೊಪಿತರನ್ನು ವಿಚಾರಿಸಲಾಗಿ ತಮ್ಮ ಹೆಸರು ಮಲ್ಲಯ್ಯ ಹಾಗೂ ಬನ್ನಪ್ಪ ಇಬ್ಬರೂ ಸಾಃ ಕಾಳಬೆಳಗುಂದಿ ಎಂದು ತಿಳಿಸಿದ್ದರು. ನಂತರ ದೊರೆತ ಮು. ಮಾ. ದಿಂದ 1 ಲೀಟರ ಸೇಂದಿಯನ್ನು ಹಾಗೂ 1 ಬೀಯರ ಬಾಟಲಿಯನ್ನು ರಾಸಾಯನಿಕ ಪರೀಕ್ಷೆಗೆ ಮಾದರಿಯಾಗಿ ತೆಗೆದುಕೊಂಡಿದ್ದೇನು. ಸ್ಥಳದಲ್ಲಿ ಸಂಜೆಃ 7.30 ರಿಂದ 8.30 ರವರೆಗೆ ಪಂಚನಾಮೆ ಮಾಡಿ ಆರೋಪಿತರು, ಬೈಕ ಹಾಗೂ ಮದ್ಯ ಮತ್ತು ಸೇಂದಿಯನ್ನು ವಶಕ್ಕೆ ಪಡೆದು ಕಚೇರಿಗೆ ಬಂದು ಸರಕಾರದ ಪರವಾಗಿ ದೂರು ದಾಖಲಿಸಿಕೊಂಡಿದ್ದೇನು.

ದಿಃ 04.05.2019 ರಂದು ಈ ಪ್ರಕರಣದ ಮಾದರಿ ಮು. ಮಾಲನ್ನು ಚಾಸಾಃ4 ರವರ ಮೂಲಕ ರಾಸಾಯನಿಕ ಪರೀಕ್ಷೆಗಾಗಿ ರಾಯಚೂರಿನ ಪ್ರಾದೇಶಿಕ ರಾಸಾಯನಿಕ ಪರೀಕ್ಷಾ ಕೇಂದ್ರಕ್ಕೆ ಕಳುಹಿಸಿ ನಂತರ ದಿಃ 22.05.2019 ರಂದು ವರದಿ ಪಡೆದುಕೊಂಡು ಪರಿಶೀಲಿಸಿ ಕಡತಕ್ಕೆ ಅಳವಡಿಸಿಕೊಂಡಿದ್ದೆನು. ನಂತರ ನನ್ನ ವರ್ಗಾವಣೆ ಆಗಿದ್ದರಿಂದ ಅಬಕಾರಿ ನೀರಿಕ್ಷಕರಾಗಿದ್ದ ಪ್ರಕಾಶ ಮಾಕೊಂಡರವರಿಗೆ ಸಂಪೂರ್ಣ ಕಾರ್ಯಭಾರ ಒಪ್ಪಿಸಿದ್ದೇನು.

ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಅವರು ಮದ್ಯ ಹಾಗೂ ಸೇಂದಿ ಸಾಗಾಟ ಮಾಡುತ್ತಿದ್ದ ವ್ಯಕ್ತಿಗಳಾಗಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿ ಮು. ಮಾ. 1 ಮತ್ತು 2 ರಲ್ಲಿನ ಬಾಟಲಿಗಳನ್ನು ನೋಡಿ ಅವುಗಳು ಮಾದರಿ ಸೇಂದಿ ಹಾಗೂ ಬಿಯರ ಬಾಟಲಿಗಳು ಆಗಿರುತ್ತವೆ ಎಂದು ನುಡಿಯುತ್ತಾರೆ.

ಸಾಕ್ಷಿಯು ನಿಪಿ-2 ರ ನಿವೇದನೆಯಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಹಾಗೂ ನಿಪಿ-1 ರ ಪಂಚನಾಮೆಯಲ್ಲಿನ ಸಹಿಯನ್ನು ನಿಪಿ-1(ಸಿ), ಶೋದನಾ ಪತ್ರವನ್ನು ನಿಪಿ-3 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-3(ಎ), ಮಾದರಿ ಮುದ್ರೆ ಚೀಟಿಯನ್ನು ನಿಪಿ-4 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-4(ಎ), ದೂರನ್ನು ನಿಪಿ-5 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-5(ಎ), ಪ್ರ.ವ.ವರದಿಯನ್ನು ನಿಪಿ-6 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-6(ಎ), ರಾಸಾಯನಿಕ ವಿಶ್ಲೇಷಣಾ ವರದಿಯನ್ನು ನಿಪಿ-7 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ವಿ. ಎಸ್. ಪಿ ವಕೀಲರಿಂದಃ</u>

ನಾವು ಸೈದಾಪೂರ ಕ್ರಾಸನಲ್ಲಿದ್ದಾಗ ಮಾಹಿತಿ ಬಂದಿತ್ತು. ಚುನಾವಣಾ ಸಮಯದಲ್ಲಿ ಎಲ್ಲಾ ಕ್ರಾಸಗಳಲ್ಲಿ ಚೆಕಪೋಸ್ಟಗಳನ್ನು ನಿರ್ಮಿಸಿರುತ್ತಾರೆ ಎಂದರೆ ಸರಿಯಲ್ಲ. ಮಾಹಿತಿ ಬಂದ ನಂತರ ನಾವು ನೀಲಹಳ್ಳಿ ಕ್ರಾಸ್ ಹತ್ತಿರ ಹೋಗಿದ್ದೇವು. ಸೈದಾಪೂರ ಕ್ರಾಸ್ ನಿಂದ ನೀಲಹಳ್ಳಿ ಕ್ರಾಸ್ 3 ರಿಂದ 4 ಕಿ.ಮೀ ದೂರ ಇರುತ್ತದೆ. ನಾವು ನೀಲಹಳ್ಳಿ ಕ್ರಾಸಗೆ ಹೋದಾಗ ಸಮಯ ಸಂಜೆಃ 7.20 ಆಗಿತ್ತು. ನೀಲಹಳ್ಳಿ ಕ್ರಾಸ್‌ಗೆ ಹೋದ ನಂತರ ಪಂಚರನ್ನು ನೇಮಕ ಮಾಡಿಕೊಂಡಿದ್ದೇನು. ಚಾಸಾಃ 2 ರವರು ನೀಲಹಳ್ಳಿ ಕ್ರಾಸ್ ಹತ್ತಿರವೇ ಇದ್ದರು. ಚಾಸಾಃ 2 ರವರನ್ನು ಚಾಸಾಃ 3 ರವರು ಕರೆದುಕೊಂಡು ಬಂದಿದ್ದರು. ನಾವು ಆರೋಪಿತರ ವಾಹನ ಹೊರತುಪಡಿಸಿ ಬೇರೆ ವಾಹನ ತಪಾಸಣೆ ಮಾಡಿರುವುದಿಲ್ಲ. ಆರೋಪಿತರು ಸೈದಾಪೂರ ಕಡೆಯಿಂದ ಬರುತ್ತಿದ್ದರು.

ಆರೋಪಿತರು ಬೀಯರನ್ನು ಸೈದಾಪೂರದ ಮದ್ಯದ ಅಂಗಡಿಯಿಂದ ತಂದಿರುವುದಾಗಿ ತಿಳಿಸಿದ್ದರು. ಸದರಿ ಮದ್ಯದ ಅಂಗಡಿಯ ಹೆಸರನ್ನು ಆರೋಪಿತರು ತಿಳಿಸಿರಲಿಲ್ಲ. ಸೇಂದಿಯನ್ನು ಎಲ್ಲಿಂದ ತಂದಿದ್ದರು ಎಂಬುದನ್ನು ಆರೋಪಿತರು ತಿಳಿಸಿರಲಿಲ್ಲ. ಪೆಟ್ರೋಲ್ ಟ್ಯಾಂಕಿನ ಮೇಲಿನ ಪ್ಲಾಸ್ಟಿಕ್ ಚೀಲದಲ್ಲಿ ಸೇಂದಿ ಇತ್ತು. ಬಿಳಿ ಬಣ್ಣದ ಚೀಲದಲ್ಲಿ ಸೇಂದಿ ಇತ್ತು. ಸದರಿ ಚೀಲವನ್ನು ಹಾಗೂ ಮಾದರಿ ತೆಗೆದ ನಂತರ ಉಳಿದ ಸೇಂದಿ ಮತ್ತು ಬಿಯರನ್ನು ಆನಂತರ ನಾಶಪಡಿಸಲಾಗಿರುತ್ತದೆ. ಸ್ಥಳದಿಂದ ಸೇಂದಿ ಚೀಲವನ್ನೂ ಸಹ ಜಪ್ತಿ ಮಾಡಿಕೊಂಡಿದ್ದೇವು. ಸ್ಥಳದಲ್ಲಿ ಸೇಂದಿಯನ್ನು ಅಳತೆ ಮಾಡಿಲ್ಲ, ಪಂಚನಾಮೆಯಲ್ಲಿ ಅಂದಾಜು ಅಳತೆ ನಮೂದಿಸಿರುತ್ತೇವೆ. ನಾನು, ಚಾಸಾಃ 3 ಹಾಗೂ ವಾಹನ ಚಾಲಕ ಸ್ಥಳಕ್ಕೆ ಹೋಗಿದ್ದೇವು. ಶಂಕರ ಮೇದಾರ ಎಂಬಾತ ಆಗ ನಮ್ಮ ಇಲಾಖಾ ವಾಹನ ಚಾಲಕ ಆಗಿದ್ದರು. ಪಂಚನಾಮೆಯನ್ನು ನಾನೇ ಬರೆದಿರುತ್ತೇನೆ.

ನಾವು ಯಾವುದೇ ದಾಳಿ ಮಾಡಿಲ್ಲ, ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿಲ್ಲ ಹಾಗೂ ಯಾವುದೇ ವಸ್ತು ಜಪ್ತಿ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಇಲಾಖಾ ಅಂಕಿ-ಅಂಶಗಳಿಗೊಸ್ಕರ ಸುಳ್ಳು ಪ್ರಕರಣ ದಾಖಲಿಸಿಕೊಂಡಿದ್ದೇವೆಂದರೆ ಸರಿಯಲ್ಲ. ನಾನು ಮಾದರಿಯನ್ನು ಪರೀಕ್ಷೆಗೆ ಕಳುಹಿಸಿಲ್ಲ ಹಾಗೂ ಯಾವುದೇ ವರದಿಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೆ ಆಗದವರ ಮಾತು ಕೇಳಿ ಸುಳ್ಳು ಪ್ರಕರಣ ದಾಖಲಿಸಿಕೊಂಡಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಃ ಇರುವುದಿಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ